ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ : ಎ.ಡಿ.ಎಂ2(2)ಪ್ರಾ.ಶಾ.ದಾ.-01/2016-17 ದಿನಾಂಕ: 18.01.2017

: : **ಜ್ಞಾಪನಾ** : :

**ವಿಷಯ:** ಮಕ್ಕಳನ್ನು ಪ್ರಾಥಮಿಕ ಶಾಲಾ ಒಂದನೇ ತರಗತಿಗೆ ದಾಖಲಾತಿ ಮಾಡಲು ವಯೋಮಿತಿಯನ್ನು ನಿರ್ಧರಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರ ಸಂಖ್ಯೆ: ಇಡಿ 124 ಪಿಬಿಎಸ್ 2012 ದಿನಾಂಕ:20.10.2012.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 51 ಪಿಜಿಸಿ 2016 ದಿನಾಂಕ:08.02.2016.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಎ.ಡಿ.ಎಂ.2(2)ಪ್ರಾ.ಶಾ.ಅ.13/2011-12(ಭಾಗ-1) ದಿನಾಂಕ: 11.02.2013.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಶಿಅ/ಶಿ.ಹ.ಕೋ.ದಾಖಲಾತಿ07/2014-15 ದಿನಾಂಕ: 29.01.2015.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಪ್ರಾಥಮಿಕ ಶಾಲೆ 1ನೇ ತರಗತಿಗೆ ಮಕ್ಕಳನ್ನು ದಾಖಲಿಸುವ ಬಗ್ಗೆ ಕರ್ನಾಟಕ ಶಿಕ್ಷಣ ಕಾಯ್ದೆ-1983ರ ನಿಯಮ-20ರಂತೆ ಹಾಗೂ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009 ರಲ್ಲಿನ ನಿಯಮಗಳಲ್ಲಿರುವ ಅಂಶಗಳನ್ನು ಪರಿಶೀಲಿಸಿ, ಒಂದನೆ ತರಗತಿಗೆ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲು ವಯೋಮಿತಿಯನ್ನು ನಿರ್ಧರಿಸಿ ಉಲ್ಲೇಖ(3) ಮತ್ತು ಉಲ್ಲೇಖ(4)ರಲ್ಲಿ ಈ ಕಛೇರಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಸದರಿ ಸುತ್ತೋಲೆಗಳಲ್ಲಿ ಪ್ರಾಥಮಿಕ ಒಂದನೇ ತರಗತಿಗೆ ಮಕ್ಕಳನ್ನು ದಾಖಲಾತಿ ಮಾಡಲು ನಿಗಧಿಗೊಳಿಸಿರುವ ವಯೋಮಿತಿಯಲ್ಲಿ ಸ್ಪಷ್ಟತೆ ಇಲ್ಲದಿರುವುದನ್ನು ಗಮನಿಸಲಾಗಿದ್ದು, ಸದರಿ ಸುತ್ತೋಲೆಗಳನ್ನು ಹಿಂಪಡೆಯಲಾಗಿದೆ.

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ-2009ರ ಕಲಂ 3ರನ್ವಯ 6 ರಿಂದ 14 ವರ್ಷದೊಳಗಿನ ಪ್ರತಿಯೊಂದು ಮಗುವು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಅವಕಾಶವಿದೆ. ಕರ್ನಾಟಕ ಶಿಕ್ಷಣ ಕಾಯಿದೆ 1983ರ ನಿಯಮ 20 ರಲ್ಲಿ ಒಂದನೇ ತರಗತಿಗೆ ಮಗು ದಾಖಲಾತಿ ಹೊಂದಲು ಇರುವ 6 ವರ್ಷಗಳ ವಯೋಮಿತಿಯಲ್ಲಿ 60 ದಿನಗಳ ವಿನಾಯಿತಿ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಪೂರ್ವ ಪ್ರಾಥಮಿಕ(ಎಲ್.ಕೆ.ಜಿ.ಗೆ) ಹಾಗೂ ಪ್ರಾಥಮಿಕ ಶಾಲೆಯ ಒಂದನೇ ತರಗತಿಗೆ ಮಕ್ಕಳನ್ನು ದಾಖಲಾತಿ ಮಾಡಲು ಕರ್ನಾಟಕ ಶಿಕ್ಷಣ ಕಾಯ್ದೆ-1983ರ ನಿಯಮ-20ರನ್ವಯ ಕೆಳಕಂಡಂತೆ ವಯೋಮಿತಿಯನ್ನು ಏಕ ರೂಪವಾಗಿ ನಿರ್ಧರಿಸಿ ಸ್ಪಷ್ಟ ಪಡಿಸಿದೆ.

| **ಪ್ರಾರಂಭಿಕ ತರಗತಿ** | **ವಯೋಮಿತಿ** |
|---|---|
| ಪೂರ್ವ ಪ್ರಾಥಮಿಕ (ಎಲ್.ಕೆ.ಜಿ) | 3 ವರ್ಷ 10 ತಿಂಗಳು |
| ಒಂದನೇ ತರಗತಿ | 5 ವರ್ಷ 10 ತಿಂಗಳು |

1. ಈ ಜ್ಞಾಪನಾ ಸರ್ಕಾರಿ ಶಾಲೆಗಳಿಗೆ, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಅನುದಾನ ರಹಿತ, ಅನುದಾನ ಸಹಿತ ಶಾಲೆಗಳಿಗೆ ಅನ್ವಯಿಸುತ್ತದೆ.
2. ಶಾಲೆಯಿಂದ ಹೊರಗುಳಿದ 6 ರಿಂದ 14 ವರ್ಷದೊಳಗಿನ ಮಕ್ಕಳು ಪ್ರಾಥಮಿಕ ಶಿಕ್ಷಣ ಪಡೆಯಲು ಶಾಲೆಗಳಿಗೆ ಬಂದಲ್ಲಿ ದಾಖಲಾತಿಯನ್ನು ನಿರಾಕರಿಸುವಂತಿಲ್ಲ. 6 ರಿಂದ 14 ರ ವಯೋಮಾನದ ಯಾವುದೇ ಮಗು ಪ್ರವೇಶ ಕೋರಿ ಬಂದಲ್ಲಿ ಮಗುವಿನ ವಯೋಮಾನಕ್ಕನುಗುಣವಾಗಿ ತರಗತಿಯನ್ನು ಸ್ಥಾನೀಕರಿಸಿ ಪ್ರವೇಶ ನೀಡುವುದು. ಉದಾಹರಣೆಗೆ:- ಶಾಲೆಯಿಂದ ಹೊರಗುಳಿದ 9ನೇ ವರ್ಷದ ಮಗು ದಾಖಲಾತಿ ಬಯಸಿ ಬಂದಲ್ಲಿ ಆ ಮಗುವನ್ನು ವಯೋಮಾನಕ್ಕನುಗುಣವಾಗಿ ಶಾಲೆಯ ಮುಖ್ಯಸ್ಥರು 4ನೇ ತರಗತಿಗೆ ದಾಖಲು ಮಾಡಿಕೊಳ್ಳತಕ್ಕದ್ದು. ಹೀಗೆ 14 ವರ್ಷದವರೆವಿಗೂ ವಯೋಮಾನಕ್ಕನುಗುಣವಾಗಿ ತರಗತಿಗಳನ್ನು ಸ್ಥಾನೀಕರಿಸಿ ಮಕ್ಕಳಿಗೆ ಪ್ರವೇಶ ನೀಡುವುದು. ಈ ಮಕ್ಕಳು ಹಿಂದಿನ ತರಗತಿಗಳ ಕಲಿಕಾಂಶ/ ಸಾಮರ್ಥ್ಯಗಳನ್ನು ಇತರೆ ರೆಗ್ಯುಲರ್ ಮಕ್ಕಳಂತೆ ಸಮಾನಾಂತರವಾಗಿ

ಪ್ರಗತಿ ಸಾಧಿಸಲು ಅನುವಾಗುವಂತೆ ಈ ಮಕ್ಕಳಿಗೆ ವಿಶೇಷ ಕಲಿಕಾ ಚಟುವಟಿಕೆಗಳನ್ನು ಹಾಗೂ ಬೋಧನಾ ಕಾರ್ಯಗಳನ್ನು ಮುಖ್ಯಶಿಕ್ಷಕರು ಆಯೋಜಿಸುವುದು.

3. ಈ ಜ್ಞಾಪನಾ 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುತ್ತದೆ. ಹಿಂದಿನ ಸಾಲಿನಲ್ಲಿ ದಾಖಲಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಇದು ಅನ್ವಯಿಸುವುದಿಲ್ಲ.

4. ಮಗುವಿನ ಜನ್ಮ ದಿನಾಂಕ ಪ್ರಮಾಣ ಪತ್ರ ಇಲ್ಲ ಎಂಬ ಕಾರಣದಿಂದ ಯಾವುದೇ ಮಗುವನ್ನು ಶಾಲಾ ದಾಖಲಾತಿಗೆ ನಿರಾಕರಿಸುವಂತಿಲ್ಲ. ಹುಟ್ಟಿದ ದಿನಾಂಕದ ಬಗ್ಗೆ ಅಧಿಕೃತ ದಾಖಲೆ ಇಲ್ಲದಿದ್ದಲ್ಲಿ ಪೋಷಕರಿಂದ ಸ್ವಯಂ ಘೋಷಣಾ ಲಿಖಿತ ಹೇಳಿಕೆಯನ್ನು ಪಡೆದು ದಾಖಲಾತಿ ಮಾಡಿಕೊಳ್ಳಲು ಸೂಚಿಸಿದೆ.

ಪೂರ್ವ ಪ್ರಾಥಮಿಕ (ಎಲ್.ಕೆ.ಜಿ)ಗೆ ಹಾಗೂ ಪ್ರಾಥಮಿಕ ಒಂದನೇ ತರಗತಿಗೆ ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೇಲ್ಕಾಣಿಸಿದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ. ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಮುಖ್ಯಶಿಕ್ಷಕರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಿ ಸೂಕ್ತ ಕ್ರಮ ಜರುಗಿಸಲಾಗುವುದು.

(ಡಾ. ಪಿ.ಸಿ. ಜಾಫರ್)
ಆಯುಕ್ತರು

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ಇವರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ವಲಯ/ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರುಗಳಿಗೆ(ಉಪನಿರ್ದೇಶಕರುಗಳ ಮುಖಾಂತರ) ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರ ಮಾಹಿತಿಗಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ/ಧಾರವಾಡ ಇವರ ಮಾಹಿತಿಗಾಗಿ.
4. ನಿರ್ದೇಶಕರು(ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ, ನಿರ್ದೇಶಕರು, ಆರ್.ಎಂ.ಎಸ್.ಎ., ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ನಿರ್ದೇಶಕರು, ಪ್ರಾಥಮಿಕ, ಪ್ರೌಢ/ಡಿ.ಎಸ್.ಇ.ಆರ್.ಟಿ./ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು ಇವರುಗಳ ಮಾಹಿತಿಗಾಗಿ.
6. ನಿರ್ದೇಶಕರು,ಅಪರ ಆಯುಕ್ತಾಲಯ, ಧಾರವಾಡ/ಕಲಬುರ್ಗಿ ಇವರ ಮಾಹಿತಿಗಾಗಿ.
7. ಇ-ಆಡಳಿತ ಶಾಖೆಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
8. ಕಛೇರಿ ಪ್ರತಿ.